†ಶ್ರೀ ಬಿ. ವಿ. ಕಕ್ಕಿಲಾಯ.—ಗೇಣಿದಾರ ಭೂಮಾಲೀಕನಾಗಬೇಕಾದರೆ ಅವನು ಕೊಡಬೇಕಾದ ಹಣವನ್ನು ಪೂರ್ತಿಯಾಗಿ ಕೊಟ್ಟರೆ ಅವನಿಗೆ ಮಾಲೀಕತ್ವ ಬರುತ್ತದೆ. ಅವನಿಗೆ ಪೂರ್ಣ ಹಕ್ಕು ಬರುವ ವರೆಗೂ ಅವನು ಆ ಜಮೀನನ್ನು ಪರಭಾರೆ ಮಾಡುವಂತಿಲ್ಲ. ಒಂದು ವೇಳೆ ಪೂರ್ತಿ ಹಣವನ್ನು ಕೊಟ್ಟ ಮೇಲೂ ಕೂಡ ಆ ಜಮೀನನ್ನು ೬ ವರ್ಷಗಳವರೆಗೆ ಪರಭಾರೆ ಮಾಡಬಾರದೆಂದು ಒರಿಜಿನಲ್ ಆಕ್ಟ್ ನಲ್ಲಿದೆ. ಹಿಂದೆ ಇದರ ಬಗ್ಗೆ ಇದೇ ಸದನದಲ್ಲಿ ಚರ್ಚೆ ಕೂಡ ಆಗಿತ್ತು. ಸಣ್ಣ ಹಿಡುವಳಿದಾರರಿಗೆ ಮತ್ತು ಅಂಗವಿಕಲರಿಗೆ, ವಿಧವೆಯರಿಗೆ, ಒಂದೇ ಕಂತಿನಲ್ಲಿ ಹಣ ಕೊಡಬೇಕಾಗುತ್ತದೆ. ಉಳಿದವರಿಗೆ ಕಂತುಗಳ ರೂಪದಲ್ಲಿ ಕೊಡುವುದಕ್ಕೆ ಅವಕಾಶವಿದೆ. ಒಂದೇ ಗಂಟಿನಲ್ಲಿ ಕೊಡಬೇಕೆಂದು ಏನೂ ಇಲ್ಲ. ಕಂತುಗಳ ರೂಪದಲ್ಲಿ ಕೊಡುವುದಾದರೂ ೨೦ ವರ್ಷಗಳಾಗುತ್ತದೆ, ಮತ್ತೆ ೧೫ ವರ್ಷಗಳು ಕಾಯಬೇಕಾಗುತ್ತದೆ. ಅಂದರೆ ಇವತ್ತಿನಿಂದ ಅವನಿಗೆ ಭೂಮಿಯ ಒಡೆತನ ಬರಲು ೩೫ ವರ್ಷಗಳ ಕಾಲ ಕಾಯಬೇಕಾಗುತ್ತದೆ. ಮೊದಲು ೬ ವರ್ಷಗಳವರೆಗೆ ಎಂದು ಇದ್ದುದನ್ನು ೧೫ ವರ್ಷಗಳವರೆಗೆ ಎಂದು ಏತಕ್ಕೆ ಮಾಡಿದಿರಿ ಎಂದು ನನಗೆ ಅರ್ಥವಾಗುತ್ತಿಲ್ಲ. ಈಗ ಭೂಮಿಯ ಮೇಲೆ ಖಾಸಗಿ ಒಡೆತನ ಇರಬಾರದು ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಗೇಣಿದಾರರನ್ನು ಭೂಮಾಲೀಕನನ್ನಾಗಿ ಮಾಡುವ ಮಟ್ಟಿಕ್ಕೆ ಮಾತ್ರ ಮಾಲೀಕತ್ವ ಪಡೆಯುವುದಕ್ಕೆ ೩೫ ವರ್ಷಗಳ ಕಾಲ ಹಿಂದೆ ಹಾಕಿದ್ದೀರಿ. ಭೂಮಿಯ ಒಡೆತನವನ್ನು ಸಂಪೂರ್ಣವಾಗಿ ತೆಗೆದು ಕೊಳ್ಳುವಂಥ ಶಾಸನ ಇದಲ್ಲ. ಇದರ ಅವಶ್ಯಕತೆಯಿಲ್ಲ ಎಂದು ನನಗನ್ನಿಸುತ್ತದೆ. ಕೇರಳ ಭೂಶಾಸನದಲ್ಲಿ ಇದರ ಬಗ್ಗೆ ಕೆಲವು ಮುಖ್ಯ ಅಂಶಗಳು ಇವೆ. ಅಂದರೆ, ನಮ್ಮದು ಉತ್ತಮವಾಗಿಲ್ಲ ಎಂದಲ್ಲ. ಅದಕ್ಕಿಂತಲೂ ಉತ್ತಮವಾದ ಅಂಶಗಳು ನಮ್ಮ ಶಾಸನದಲ್ಲಿವೆ. ಗೇಣಿದಾರರಿಗೆ ಭೂಮಿಯನ್ನು ಬಿಟ್ಟುಕೊಡಲಿಕ್ಕೆ ಗೇಣಿದಾರ ಒಂದು ಕಂತನ್ನು ಪಾವತಿ ಮಾಡಿದ್ದರೆ ಅವನಿಗೆ ಭೂಮಿಯ ಹಕ್ಕನ್ನು ಅಲ್ಲಿ ಕೊಟ್ಟಿದ್ದಾರೆ. ಆದರೆ ಆದರಿಂದ ಎಷ್ಟೋ ಅನಾಹುತಗಳಾಗಿವೆ ಎನ್ನತಕ್ಕದ್ದು ನಮಗೆ ಗೊತ್ತಿದೆ. ಅವನು ಕಂತಿನ ರೀತಿಯನ್ನು ಕೊಟ್ಟಕೂಡಲೇ ಭೂಮಿಯ ಹಕ್ಕು ಬರುತ್ತದೆ, ಆದರೆ ಬೇರೆ ಹಣವಂತರಿಂದ ಇದರ ದುರುಪಯೋಗವಾಗಿ ಅವನು ಭೂಹೀನನಾದದ್ದು ಇದೆ. ಇದು ನಮ್ಮಲ್ಲಿ ಆಗಬಾರದು ಎಂದು ನನ್ನ ಅಭಿಪ್ರಾಯ. ಆರು ವರ್ಷಗಳ ಕಾಲ ಪರಭಾರೆ ಆಗಬಾರದು ಎನ್ನುವ ರೆಸ್ಟ್ರಿಕ್ಷನ್‌ನ್ನು ಹೋದ ಸಲ ನಾವು ಈ ಕಾನೂನನ್ನು ಮಾಡಿದಾಗ ಕೂಲಂಕುಷವಾಗಿ ನಾವು ಯೋಚನೆ ಮಾಡಿ ಈ ಅವಧಿಯನ್ನು ಗೊತ್ತುಮಾಡಿದ್ದೆವು. ಇದು ವಾಸ್ತವಿಕವಾಗಿ ೨೬ ವರ್ಷದವರೆಗೆ ಹೋಗುತ್ತದೆ. ಆದರೆ ಇದಕ್ಕೆ ಈಗ ೩೫ ವರ್ಷಗಳ ಕಾಲ ಕಾಯುವುದಕ್ಕೆ ಅವಕಾಶ ಮಾಡಿರುವುದು ನ್ಯಾಯವಾದುದಲ್ಲ, ಮತ್ತು ಇದರ ಅವಶ್ಯಕತೆಯೂ ಇಲ್ಲ, ಇದನ್ನು ತಾವು ಪರಿಶೀಲನೆ ಮಾಡಬೇಕು, ತಮ್ಮ ತಿದ್ದುಪಡಿಯಲ್ಲಿ ಈ ಸಂದರ್ಭದಲ್ಲಿ ಅನಾವಶ್ಯಕ, ಇದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ತಾವು ಇದನ್ನು ಮಂಡಿಸಬಾರದು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಗೇಣಿದಾರರ ಜೀವನವನ್ನು ಸುಧಾರಣೆ ಮಾಡಬೇಕು ಎನ್ನುವ ಉದ್ದೇಶದಿಂದಲೇ ನಾವು ಭೂಸುಧಾರಣೆಯನ್ನು ತಂದಿರುವುದು. ನಮ್ಮಲ್ಲಿ ಗೇಣಿದಾರ ಎರಡು ವರ್ಷದಲ್ಲಿ ಗೇಣಿಯನ್ನು ಕೊಟ್ಟುಬಿಟ್ಟು, ಭೂಮಾಲೀಕನಾಗಬೇಕು ಎನ್ನುವಂಥ ನಿರ್ಭಂದ ಏನೂ ಇಲ್ಲ. ಆದರೆ ಭೂಮಿಯನ್ನು ಈ ಪೆಡ್ಯೂಲ್ಡ್‌ಕ್ಯಾಸ್ಟ್ ಮತ್ತು ಪೆಡ್ಯೂಲ್ಡ್‌ಟ್ರೈಬ್ಸ್ ಜನ ಸರ್ಕಾರದಿಂದ ಪಡೆದುಕೊಂಡ ಮೇಲೆ ಅದನ್ನು ಮಾರುವ ಹಾಗಿಲ್ಲ. ಇಂಥ ಒಂದು ಅವಕಾಶವನ್ನು ನಾವು ತೆಗೆದುಹಾಕಿ, ೧೫ ವರ್ಷದವರಿಗಾದರೂ ಇವರು ಸುಖವಾಗಿರಲೀ ಎಂದು ಇಂಥ ಒಂದು ಅವಕಾಶ ಮಾಡಿಕೊಟ್ಟಿದ್ದೇವೆ. ಮಾನ್ಯ ಸದಸ್ಯರ ವಾದ ಈ ಸಂದರ್ಭದಲ್ಲಿ ಸಮಯೋಚಿತವಲ್ಲ ಎಂದು ನನಗನ್ನಿಸುತ್ತದೆ.

ಶ್ರೀ ಬಿ. ವಿ. ಕಕ್ಕಿಲ್ಲಾಯ.—ನಾನು ಗೇಣಿದಾರರು ಭೂಮಿಯನ್ನು ಕಳೆದುಕೊಳ್ಳಬೇಕು ಎನ್ನುವ ಉದ್ದೇಶದಿಂದ ಹೇಳುತ್ತಿಲ್ಲ. ಇಂಥ ಅನಾಹುತಗಳು ಆಗಿವೆ, ಭೂಮಿಯ ಹಕ್ಕು ಬಂದ ಮಾರನೆಯ ದಿವಸ ಭೂಮಿಯನ್ನು ಕಳೆದುಕೊಂಡಿದ್ದಾರೆ. ನಮ್ಮರಾಜ್ಯದಲ್ಲಿ ಹೀಗಾಗಬಾರದು. ಆದರೆ ಇಷ್ಟೊಂದು ದೀರ್ಘ ಕಾಲದ ಮಿತಿಯ ಅವಶ್ಯಕತೆ ಇಲ್ಲ. ಹಿಂದೆ ನಾವು ಏನು ಆರು ವರ್ಷಗಳ ಮಿತಿಯನ್ನು ಇಟ್ಟಿದ್ದೆವು ಅದು ಸಾಕಾಗಿತ್ತು. ಆರು ವರ್ಷದಲ್ಲಿ ಅವನು ಭೂಮಿಯ ಮಾಲೀಕತ್ವವನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತಿತ್ತು. ಅದಕ್ಕಿಂತ ಹೆಚ್ಚಿನ ಅವಧಿಯ ಅವಶ್ಯಕತೆ ಇಲ್ಲ ಮತ್ತು ಗೇಣಿದಾರ ಜಮೀನನ್ನು ಕಳೆದು ಕೊಳ್ಳತಕ್ಕ ಪರಿಸ್ಥಿತಿ ಇಲ್ಲಿ ಬರುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರ ನಿರೀಕ್ಷಣೆಯ ಪ್ರಕಾರ ಸಮಾಜದಲ್ಲಿ ಎಲ್ಲರೂ ಬುದ್ಧಿವಂತರಾಗಲೀ ಆಮೇಲೆ ಬೇಕಾದರೆ ಇದಕ್ಕೆ ಒಂದು ತಿದ್ದುಪಡಿಯನ್ನು ತರುವುದಕ್ಕೆ ಪ್ರಯತ್ನ ಮಾಡೋಣ. ಆದರೆ ಈಗ ಗೇಣಿದಾರರ ಜೀವನವನ್ನು ಉತ್ತಮ ಉದ್ದೇಶದಿಂದ ಇದನ್ನು ನಾವು

ತಂದಿದ್ದೇವೆ, ಅದೇ ರೀತಿಯಲ್ಲಿ ನಿಮ್ಮ ವರ್ಗದವರಿಗೆ ಕೊಟ್ಟ ಭೂಮಿಗಳು, ೧೫ ವರ್ಷದವರೆಗೆ ಬೇರೆಯವರಿಗೆ ಪರಭಾರೆ ಮಾಡಬಾರದು ಎಂದು ಹೇಳಿದ್ದೇವೆ. ವಿಲೇಜ್ ಆಫೀಸರ್ಸ್‌ಗೂ ಇಂಥ ಒಂದು ಅವಧಿಯನ್ನು ನಾವು ನಿಗದಿಮಾಡಿದ್ದೇವೆ. ಇವರು ಹಣ ಕೊಟ್ಟುಬಿಟ್ಟು ಭೂಮಾಲೀಕತ್ವವನ್ನು ಪಡೆದು ಸುಖವಾಗಿರಲಿ ಎನ್ನುವುದೇನಮ್ಮ ಉದ್ದೇಶ ಬೇರೆ ಏನೂ ಇಲ್ಲ.

ಶ್ರೀ ಬಿ. ವಿ. ಕಕ್ಕಿಲಾಯ.—ನಾನು ನನ್ನ ತಿದ್ದುಪಡಿಯನ್ನು ಒತ್ತಾಯ ಮಾಡುವುದಿಲ್ಲ.

*The amendment was, by leave, withdrawn.*

MR. SPEAKER.—Now I will put the amendment No. 32 moved by the Hon. Minister for Revenue to the Vote of the House. The question is.—

"That after sub-clause (2), the following sub-clause shall be inserted

',(3) In sub-section (3), at the end, add the following namely:-

"any such land shall vest in the State Government free from all encumbrances and shall be disposed in accordance with the rules relating to grant of Government lands."

*The amendment was adopted.*

MR. SPEAKER.—The question is

"That Clause 20, as amended, do stand part of the Bill."

*The motion was adopted.*

Clause 20, as amended, was added to the Bill.

CLAUSE-21

MR SPEAKER.—The question is

"That Clause 21 do stand part of the Bill."

*The motion was adopted.*

Clause 21 was added to the Bill.

CLAUSE-22

MR. SPEAEER.—There are amendents given notice of by the Hon. Member Sri T. R. Shamanna and the Hon. Ministes for Revenue.

SRI B. BASAVALINGAPPA.—I beg to move.

"That in Clause 22 for the words ' non negotiable" substi tute the words "non transferable and non negotiable".

*The Question was proposed*

MR. SPEAKER.—I will put it to the vote. The question is

"That in Clause 22 for the words "non negotiable" substitute the words "non transferrable and non negotiable."

*The amendment was adopted*

MR. SPEAKER.—Sriyuths B. V. Kakkilaya, Pampavathi and S. F. Bhairy have suggested for deletion of Clause 22 and it cannot be treatad as an amendment.

Then, will the hon. Member Sri T. R. Shamanna propose to move his amendment ?

SRI T. R. SHAMANNA.—No.

MR. SPEAKER.—Then, I will put Clause 22 as amended to the Vote of the House.

MR. SPEAKER.—The question is

"That Clause 22, as amended, do stand part of the Bill."

*The motion was adopted and*

Clause 22, as amended, was added to the Bill.

CLAUSE-23

MR. SPEAKER.—Smt S. Pramila has given a notice of amendment

†SMT. S. PRAMILA.—Sir, I beg to move.

"That in Section 77 (1) of the Principal Act, at the end of item (iv) of the table, the following item (v) shall be added namely.—

"Landless widows who have lost lands not less than one unit each."

*The Question was Propo ed*

ಶ್ರೀಮತಿ ಎಸ್. ಪ್ರಮಿಳ.—ಪ್ರಿನ್ಸಿಪಲ್ ಆಕ್ಟ್‌ನಲ್ಲಿ ಸೆಕ್ಷನ್ ೭೭ ಐಟಂ ೪-ರಲ್ಲಿ ಲ್ಯಾಂಡ್‌ಲೆಸ್ ವಿಡೋಸ್‌ಗೆ ಭೂಮಿಯೂ ಇಲ್ಲದ ಹಾಗೆ ಮಾಡಿದ್ದೀರಿ. ಅದಕ್ಕೋಸ್ಕರ ನನ್ನ ತಿದ್ದುಪಡಿಯಂನ್ನು ಇಲ್ಲಿ ಸೇರಿಸಿಕೊಳ್ಳಬೇಕು ಎಂದು ಹೇಳುತ್ತೇನೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಶ್ರೀಮತಿ ಪ್ರಮಿಳ ಅವರು ಯಾವಾಗಲೂ ಗಂಡು ಹೆಣ್ಣಿನ ಸಮಸ್ಯೆಗಳ ಬಗ್ಗೆ ಮಾತನಾಡುತ್ತಿದ್ದಾರೆ, ಅವರಿಗೆ ಇಂಥ ಅನುಭವ ಹೇಗೆ ಬಂತು ಎಂದು ನನಗೆ ಅರ್ಥವಾಗುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಗಂಡಸರ ಸಮಾಚಾರ ಹೇಳುವುದಕ್ಕೆ ಮಾನ್ಯ ಚಂದ್ರಶೇಖರ್ ಅವರು ಗುತ್ತಿಗೆ ತೆಗೆದುಕೊಂಡ ಹಾಗೆ ಕಾಣುತ್ತದೆ. ಅವರ ವಿಚಾರದಲ್ಲಿ ಕಾನೂನು ಬದ್ಧವಾಗಿ, ಸಂವಿಧಾನದ ಬದ್ಧವಾಗಿ, ಮಾತನಾಡುವುದಕ್ಕೆ ಅವಿಭಾಜ್ಯ ಹಕ್ಕನ್ನು ಇವರೇ ಪಡೆದಿದ್ದಾರೆ, ಬೇರೆಯವರು ಮಾತನಾಡಬಾರದೇ ಎಂದು ಅವರು ತಿಳಿದುಕೊಂಡಿದ್ದಾರೆ. ಇಂಥ ಅವರ ಅಭಿಪ್ರಾಯಕ್ಕೆ ನಾನು ಅಡ್ಡಿ ಬರುವುದಿಲ್ಲ.

೪-೦೦ ಎ. ಎಂ.

ಶ್ರೀಮತಿ ಎಸ್. ಪ್ರಮೀಳ.—ಒಬನೇ ಸೆಕ್ಷನ್ ಕ್ಲಾಸ್ ಳರಲ್ಲಿ 'Reservation, disposal of surplus land' ಎಂದು ಇದೆ. ಈ ಲ್ಯಾಂಡನ್ನು Ex-Military personnel whose gross annual income does not exceed two thousand, ಯಾರಿದ್ದಾರೆ ಅಂಥವರಿಗೆ ರಿಸರ್ವೇಷನ್ ಎಂದು ಮಾಡಿದ್ದೀರಿ. ಜೊತೆಗೆ ಬೇರೆ ಬೇರೆ ಜನಗಳಿಗೂ ಕೂಡ ರಿಜರ್ವೇಷನ್ ಮಾಡಿದ್ದೀರಿ. ಈ ಕಾಲಂನಿಂದ ಸಹಸ್ರಾರು ಮಂದಿ ವಿಧವೆಯವರು ಜಮೀನನ್ನು ಕಳೆದುಕೊಂಡಿದ್ದಾರೆ, ನಿರ್ಗತಿಕರಾಗಿದ್ದಾರೆ. ಆದ್ದರಿಂದ, ಅಂಥವರಿಗೆ, ಜೀವನ ಮಾಡುವುದಕ್ಕೆ ಅನುಕೂಲವಾಗದೆ ಇರುವವರಿಗೆ, ಇಲ್ಲಿಯೂ ಕೂಡ ರಿಸರ್ವೇಷನ್ ಮಾಡಿದರೆ ಹೆಣ್ಣುಮಕ್ಕಳಿಗೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ದಯವಿಟ್ಟು ಹೆಣ್ಣುಮಕ್ಕಳ ಮೇಲೆ ಕನಿಕರವನ್ನಿಟ್ಟು, ಈ ಒಂದು ಅಮೆಂಡ್‌ಮೆಂಟಿನಲ್ಲಿ not less than one unit ಎಂದು ಏನು ಎಲ್ಲರಿಗೂ ಕೊಟ್ಟಿದ್ದೀರಿ ಅದೇ ರೀತಿ ಒಂದು ಯೂನಿಟ್ಟನ್ನಾದರೂ ಕೊಟ್ಟು ಅವರ ಜೀವನಕ್ಕೆ ಒಂದು ಮಾರ್ಗವನ್ನು ಮಾಡಿಕೊಡಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ನಮಗೆ ಹೆಣ್ಣುಮಕ್ಕಳ ಮೇಲೆ ಅಭಿಮಾನ ಇದೆ, ಪ್ರೀತಿ ಇದೆ, ಇಲ್ಲವೆಂದು ಅಲ್ಲ. ಇದರಲ್ಲಿ ಏನು ಹೇಳಿದ್ದೇವೆಂದರೆ, 'Landless Widow'–she is also a landless person in Law–He includes She; and She includes He. I think I am correct.

ಶ್ರೀಮತಿ ಎಸ್. ಪ್ರಮೀಳ.—ಹಾಗಿದ್ದಮೇಲೆ ಮೊದಲನೆ ಅಮೆಂಡ್‌ಮೆಂಟನ್ನು ಏಕೆ ಬಿಟ್ಟು ಬಿಟ್ಟಿರಿ? 'Daughter includes Son' ಎಂಬುದನ್ನು. ಮಾನ್ಯ ಮಂತ್ರಿಗಳು ಇಂಟರ್‌ಪ್ರಿಟೇಷನ್ ಅನ್ನು ಒಪ್ಪಿಕೊಳ್ಳುತ್ತಾರೆಂದು ಕಾಣುತ್ತದೆ. She includes He ಅಂದರೆ Daughter include Son. Unmarried Daughter and Unmarried Sons ಅಂದರೆ ಒಪ್ಪಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಆನ್‌ಮ್ಯಾರೀಡ್ ಡಾಟರ್ಸ್‌ಗೆ ಎಷ್ಟು ಅವಕಾಶ ಕೊಡಬೇಕೋ ಆಷ್ಟನ್ನು ಈ ಆಕ್ಟ್‌ನಲ್ಲಿ ಕೊಡುತ್ತೇವೆ. ಆಕೆಗೆ ತಾಯಿಯ ಕಡೆಯಿಂದ ಸ್ತ್ರೀಧನ ಬರುತ್ತದೆ ಮತ್ತು ತಂದೆಯ ಕಡೆಯಿಂದ ಭಾಗ ಬರಂತ್ತದೆ ಲ್ಯಾಂಡ್‌ಲೆಸ್ ಪರ್ಸನ್ ಆದ್ದರಿಂದ ಅವರಿಗೂ ಸರ್ಪ್ಲಸ್ ಲ್ಯಾಂಡ್‌ನಲ್ಲಿ ಜಮೀನನ್ನು ಕೊಡಲಾಗುವುದು.

ಶ್ರೀಮತಿ ಎಸ್. ಪ್ರಮೀಳ.—ಒಟ್ಟಿನಲ್ಲಿ ನಾನು ಈ ಅಮೆಂಡ್‌ಮೆಂಟನ್ನು ಪ್ರೆಸ್ ಮಾಡುತ್ತೇನೆ, ವಿತ್‌ಡ್ರಾ ಮಾಡಿಕೊಳ್ಳುವುದಕ್ಕೆ ತಯಾರಿಲ್ಲ. ಮಾನ್ಯ ಮಂತ್ರಿಗಳಿಗೆ ಹೆಣ್ಣುಮಕ್ಕಳ ಬಗ್ಗೆ, ವಿಧವೆಯರ ಬಗ್ಗೆ ಕನಿಕರ ಇಲ್ಲದಿದ್ದರೆ ಇದನ್ನು ತೆಗೆದುಹಾಕಬಹುದು.

CLAUSE 23

MR. SPEAKER.—I will put amendment No. 36 moved by Pramila to the vote of the House. The question is,

"In Section 77(1) of the Principal Act at the end of item (iv) of the table the following item (v) shall be added namely"

"Landless widows who have lost lands.....not less than one unit each".

*The amendment was negatived.*

MR. SPEAKEAR.—I will put Clause 23 to the vote of the House. The question is.—

"That Clause 23 do stand part of the Bill".

*The motion was adopted.*

Clause 23 was added to the Bill.

CLAUSE 24 TO 27

MR. SPEAKER.—As there are no amendments I will put Clauses 24 to 28 both inclusive to the vote of the House. The question is,

"That Clauses 24 to 27 both inclusive do stand part of the Bill".

*The motion was adopted.*

Clauses 24 to 27 both inclusive were added to the Bill.

CLAUSES 27A

MR. SPEAKER —Hon'ble Minister for Revenue may move amendment to Clause 27(A).

SRI B. BASAVALINGAPPA.—Sir, I beg to move.—

"That after Clause 27(A) insert the following.—

"27A Amendment of section 104.-In section 104 of the Principal Act, for the words 'The provisions of', the words and figurs 'The provisions of section 38', shall be substituted."

*The question was proposed,*

MR. SPEAKER.—I will put it to the vote.

The question is :

"That After clause 27(A) insert the following.—

"27A Amendment of section 104 of the principal Act, for the words 'The provisions of', the words and figures 'The provisions of section 38', shall be substituted."

*The amendment was adopted.*

New clause 27(A) was added to the Bill.

CLAUSE 28

The question is :

"That clause 28 do stand part of the Bill."

*The motion was adopted.*

Clause 28 was added to the Bill.

CLAUSE 29

MR. SPEAKER.—There is a notice of amendment by Smt. S. Pramila.

SMT. S. PRAMILA.—Sir, I beg to move.—

"That in Section 107 of the principal Act sub-section (4) (5) and (6) shall be deleted."

*The question was proposed.*

ನಾನು ಈ ಅಮೆಂಡ್‌ಮೆಂಟನ್ನು ಮೂವ್ ಮಾಡುತ್ತಾ, ಈ ೧೦೭ನೇ ಸೆಕ್ಷನ್ನಿನ ಕ್ಲಾಸ್ ೫-ಓರಲ್ಲಿ ಏನು 'ಕುದುರೆ ಲಾಯ ಮತ್ತು ಲಿನಾಲೋ' ಎಂದು ಇದೆ ಅದನ್ನು ತೆಗೆದುಹಾಕಬೇಕೆಂದು ಹೇಳುತ್ತೇನೆ. ನಮ್ಮ ಈ ಸರ್ಕಾರದವರು ಕರ್ನಾಟಕ ಪ್ರದೇಶದಲ್ಲಿ ಹೆಣ್ಣುಮಕ್ಕಳಿಗೆ ಜಮೀನು ಇಲ್ಲವೆಂದು ಹೇಳುತ್ತಾರೆ. ಈ ೧೦೭ನೇ ಸೆಕ್ಷನ್‌ನ ಪ್ರಕಾರ ಇಂಥ ಕುದುರೆ ಲಾಯಗಳಿಗೆ, ಜಮೀನನ್ನು ಇಟ್ಟುಕೊಳ್ಳಬಹುದು; ಆದರೆ ಹೆಣ್ಣುಮಕ್ಕಳು ಇಟ್ಟುಕೊಳ್ಳುವುದು ಬೇಡವೆಂದು ಮಾಡಿದ್ದೀರಿ. ಈ ಸೆಕ್ಷನ್ನಿನ ಕ್ಲಾಸ್ ೫ರಲ್ಲಿ ಕುದುರೆ ಲಾಯಗಳಿಗೆ ಜಮೀನನ್ನು ಇರಬೇಕೆಂಬುದನ್ನು ಇನ್‌ಕಾರ್ಪೊರೇಟ್ ಮಾಡಿದ್ದೀರಿ. ಇದರಿಂದ ಹೆಣ್ಣುಮಕ್ಕಳನ್ನು ಕುದುರೆಗಳಿಗಿಂತಲೂ ಕಡಿಮೆ ಎಂದು ಮಾಡಿರತಕ್ಕದ್ದು ತುಂಬ ಅವಮಾನಕರ. ಆದರಿಂದ ಈ ಸೆಕ್ಷನ್ ಭೂಸುಧಾರಣಾ ಕಾಯಿದೆಯಲ್ಲಿ ಇರತಕ್ಕದ್ದಲ್ಲವೆಂದು ಹೇಳುತ್ತೇನೆ. ಒಂದು ಪೇಳೆ ಅದನ್ನು ಇಟ್ಟರೆ ಮನುಷ್ಯರನ್ನು ಪ್ರಾಣಿಗಳಿಗಿಂತ ಕಡಿಮೆ ಎಂದು ಭಾವಿಸಿದಂತಾಗುತ್ತದೆ. ಆದ್ದರಿಂದ ಇದನ್ನು ತೆಗೆದುಹಾಕಿ ಎಂದು ಹೇಳುತ್ತೇನೆ. ಇನ್ನು ಕ್ಲಾಸ್ ೬ರಲ್ಲಿ ಲಿನಾಲೋ ಎಂಬುದನ್ನು ಇನ್‌ಕಾರ್ಪೊರೇಟ್ ಮಾಡಿದ್ದೀರಿ. ಒಂದೇ ಒಂದು ಕಾರಣದಿಂದ ಒಬ್ಬ ವ್ಯಕ್ತಿ ರಷ್ಯದಿಂದ ಬಂದು ಈ ದೇಶದಲ್ಲಿ ಸೆಂಟ್ ತೆಗೆದು ರಷ್ಯಕ್ಕೆ ಎಕ್ಸ್‌ಪೋರ್ಟ್ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಏಕಮಾತ್ರ ವ್ಯಕ್ತಿಗೋಸ್ಕರ ಈ ಒಂದು ಸೆಕ್ಷನ್ ಅನ್ನು ಇಟ್ಟಿರುವುದು ಬಹಳ ತಪ್ಪು. ಯಾವಾಗಲೂ ಒಂದು ಕಾನೂನನ್ನು ಕೇವಲ ಒಬ್ಬ ವ್ಯಕ್ತಿಯ ಉಪಯೋಗಕ್ಕೆ ಆಗದೆ ಸಾರ್ವಜನಿಕರೆಲ್ಲರಿಗೂ ಆದರಿಂದ ಉಪಯೋಗ ಆಗಬೇಕು. ಆದ್ದರಿಂದ. ಈ ಲಿನಾಲೋ ಎನ್ನತಕ್ಕ ಸೆಕ್ಷನ್ ಅನ್ನು ತೆಗೆದುಹಾಕ ಬೇಕೆಂದು ಹೇಳುತ್ತೇನೆ. ಸೆಂಟ್ ನಮಗೆ ಬೇಡ. ಜಮೀನು ಇಲ್ಲದ ಒಂದು ಹೆಣ್ಣಿಗಾಗಿ ಒಂದು ಸೆಕ್ಷನ್ ಅನ್ನು ತಂದರೆ ಅದು ತಪ್ಪಾಗುತ್ತದೆಯೆ ಎಂದು ಕೇಳುತ್ತೇನೆ. (ಕೆಲವು ಮಾನ್ಯ ಸದಸ್ಯರು ಹೆಣ್ಣು ಎಂಬ ಶಬ್ದವನ್ನು ಎತ್ತಿದರೆ ಸಾಕು ಇಲ್ಲದ ಆರೋಪಗಳನ್ನು ಮಾಡಬಾರದೆಂದು ಹೇಳುತ್ತಿರುತ್ತಾರೆ. ಆ ಕಾರಣದಿಂದ ಇನ್ನು ಮೇಲೆ ಹೆಣ್ಣು ಅನ್ನುವುದರ ಬದಲು ವ್ಯಕ್ತಿ ಎಂದು ಮಾತನಾಡುತ್ತೇನೆ.) ಯಾವುದೇ ಒಂದು ಸೆಕ್ಷನ್ ಅನ್ನು ತರಬೇಕಾದರೂ ಒಬ್ಬ ವ್ಯಕ್ತಿಯ ಸಲುವಾಗಿ ತರುವುದು ತಪ್ಪು, ಹಲವಾರು ಜನರಿಗೆ ಉಪಯೋಗವಾಗುವ ಸಲುವಾಗಿ ತರಬೇಕು, ಒಬ್ಬ ವ್ಯಕ್ತಿಯ ಸಲುವಾಗಿ ತಂದಿರತಕ್ಕದ್ದು ದುರದೃಷ್ಟಕರ ಎಂದು ಹೇಳುತ್ತಾ, ೫ ಮತ್ತು ೬ ಈ ಎರಡು ಕಲಮ್‌ಗಳನ್ನು ತೆಗೆದುಹಾಕಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ, ಮಾನ್ಯ ಸದಸ್ಯರಾದ ಪ್ರಮೀಳಾರವರು ಹೆಣ್ಣುಮಕ್ಕಳ ರಕ್ಷಣೆಗೆ ಗುತ್ತಿಗೆ ತೆಗೆದುಕೊಂಡಿದ್ದಾರಾ?

ಶ್ರೀಮತಿ ಎಸ್. ಪ್ರಮೀಳಾ.—ಬೇರೆ ಯಾರೂ ತೆಗೆದುಕೊಳ್ಳದೇ ಇದ್ದಾಗ ನಾವಾದರೂ ತೆಗೆದುಕೊಳ್ಳಬೇಕಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ನಾವೂ ತೆಗೆದುಕೊಂಡಿದ್ದೇವೆ. ನಾವೂ ರಕ್ಷಣೆ ಕೊಡುತ್ತಿದ್ದೇವೆ. ನೀವೂ ತೆಗೆದುಕೊಂಡಿದ್ದರೆ ಬಹಳ ಸಂತೋಷ. ಮಾನ್ಯ ಸದಸ್ಯರು ಏನು ತಿದ್ದುಪಡಿಯನ್ನು ಸೂಚಿಸಿದ್ದಾರೆ ಅದನ್ನು ಒಪ್ಪುವುದಕ್ಕಾಗುವುಲ್ಲ.

ಅಧ್ಯಕ್ಷರು.—ನೀವು ನಿಮ್ಮ ತಿದ್ದುಪಡಿ ಬಗ್ಗೆ ಒತ್ತಾಯ ಮಾಡುತ್ತೀರಾ ?

SMT. S. PRAMILA.—Sir, I press my amendment.

MR. SPEAKER.—I shall put it to the vote of the House. The question is:

"That section 107 of the principal Act sub-sections (4) (5) (6) shall be deleted."

*The amendment was negatived.*

MR. SPEAKER.—The question is.—

"That clause 29 do stand part of the Bill."

*The motion was adopted.*

Clause 29 was added to the Bill.

CLAUSE 30

SRI B. V. KAKKILAYA.—Sir, I do not wish to move my amendment to clause 30.

MR. SPEAKER.—The Hon'ble Revenue Minister may move his amendment.

SRI B. BASAVALINGAPPA.—Sir, I beg to move,—

"That for clause 30, substitute the following.—

"Amendment of Section 112.—In section 112 of the principal Act, under the headings (B) Duties of the Tribunal,

(i) in item (a), after the words 'hold an enquiry', the words '(including local inspection)' shall be inserted;

(ii) for item (c), the following item shall be substituted, namely.—

"(c) to hold necessary enquiry (including local inspection) and pass orders in cases relating to registration of agricultural labourers as owners of dwelling house and land appurtenant thereto under Section 38."

*The question was proposed.*

MR. SPEAKER.—The question is.—

"That for clause 30. substitute the following.—

"Amendment of Section 112.—In Section 112 of the principal Act, under the heading (B) Duties of the Tribunal.—

(i) in item (a), after the words 'hold an enquiry', the words '(including local inspection)' shall be inserted;

(ii) for item (c), the following item shall be substituted, namely.—

"(c) to hold necessary enquiry (including local inspection) and pass orders in cases relating to registration of agricultural labourers as owners of dwelling house and land appurtenant thereto under Section 38."

*The amendment was adopted and the clause was substituted.*

NEW CLAUSE 30A

MR. SPEAKER.—The Hon'ble Minister for Revenue may move his amendment.

SRI B. BASAVALINGAPPA.—Sir, I beg to move.

"That after clause 30, insert the following.—

'Amendment of Section 115.—In Section 115 of the principal Act, for the words 'Deputy Commissioner' wherever they occur the words 'the Tribunal, the Deputy Commissioner' shall be substituted and the words 'on him' shall be omitted.

*The question was proposed.*

MR. SPEAKER.—The question is.

"That after claue 30, insert the following.—

"Amendment of Section 115.—In Section 115 of the principal Act, for the words 'Deputy Commissioner' wherever they occur, the words 'the Tribunal, the Deputy Commissioner' shall be substituted and the words 'on him' shall be omitted."

*The amendment was adopted and clause 30A was inserted.*

CLAUSE 31 to 33

MR SPEAKER.—As there are no amendments to clauses 31, 32 and 33, I shall put them to the vote of the House, The question is:

"That clauses 31, to and 33 both inclusive do stand part of the Bill."

*The motion was adopted*

Clause 31, to 33 both inclusive were added to the Bill

CLAUSE 34

SRI B. V. KAKKILAYA.—Sir, I do not move my amendment to clause 34.

MR SPEAKER,—I shall put clause 34 to the vote of the House.

The question is ;

"That clause 34 do stand part of the Bill"

*The motion was adopted.*

Clause 34 was added to the Bill

CLAUSE 35

MR SPEAKER.—The Hon'ble Minister for Revenue may move his amendment.

SRI B. BASAVALINGAPPA.Sir, I beg to move :

That for clause 35, substitute the following :

"35. Amendment of Section 126 :—In Section 126 of the principal Act, after the words 'alienated villages or lands' the brackets and words '(including tenants referred to in Section 8 of the Village Officers' Abolition Act, 1961 but subject to the provisions of the said Act), Shall be inserted."

*The question was proposed*

MR SPEAKER.—The question is .

That for clause 35, substitute the following :—

"35. Amendment of Secton 126.—In Section 126 of the principal Act, after the words 'alienated villages or lands' the brackets and words ''including tenants referred to in Section 8 of the Village Officers' Abolition Act, 1961 but subject to the provisions of the Said Act)' Shall be inserted."

*Amendment was adopted and clause was substituted*

CLAUSES 36 and 37

MR SPEAKER.—The question is :

"That clause 36 and 37 do stand part of the Bill."

*The motion was adopted*

Clause 36 and 37 were added to the Bill.

CLAUSE 38

MR SPEAKER.—The hon'ble Member Sri Kakkilaya may move his amendment.

SRI B. V. KAKKILAYA.—Sir, I donot wish to move my amendment in view of the changes brought about by the Hon'ble Minister.

MR SREAKER.—The Hon'ble Minister for Revenue may move his amendment.

SRI BASAVALINGAPFA.—Sir, I beg to move :

That for clause 38, substitute the following :

**38.** "**Amendment of Schedule I** :—In Schedulel to the principal Act.

(1) the words 'notified by the State Government to be' in the three places where they occur shall be omitted.

(2) under the heading classificatian of lands,-

(i) in A Class after the word 'paddy' the words 'or one crop of sugarcane' shall be inserted ;

(ii) in item (ii) of B Class, after the word 'paddy' the words 'or one crop of sugar cane' shall be inserted."

*The question was proposed*

MR SREAKER.—The question is :

That for clause 38, substituted the following :—

"**38. Amendment of Schedule I** :—In Schedule I to the principal Act,—

(1) the words 'notified by the State Government to be' in the three places where they occur shall be omitted.

(2) under the heading classification of lands,—

(i) in A Class after the word 'paddy' the words 'or one crop of sugarcane, shall be inserted ;

(ii) in item (ii) of B Class, after the word 'paddy' the words 'or one crop of sugarcane' shall be inserted."

*The amendment was adopted and the clause was substituted*

CLAUSE 39

MR SPEAKER....The question is :

"That clause 39 do stand part of the Bill."

*The motion was adopted*

Clause 39 was added to the Bill

CLAUSE 40

MR SPEAKER,—There is an amendment given notice of by the Hon'ble Minister for Revenue, He may move it,

SRI B. BASAVALINGAPPA.—I move :

For sub-clause (3), substitute the following :—

"(2) All application under section 7 of the principal Act, and proceedings connected therewith.—

(i) pending before a Tahsildar, before the date of commencement of this Act, shall as and from the said date transferred to the Tribunal and shall be continued and disposed of by such Tribunal, in accordance with the principal Act as amended by this Act, as if such applications and proceedings have been filed or commenced before such Tribunal ;

(ii) having been disposed off by the Tahsildar pending in appeal on revision, such appeal or revision shall abate and the applications or proceedings giving rise to such appeal or revision, shall stand re-opened and transferred to and commenced afresh before the Tribunal as if the amendments made by this Act to the principal Act were in force at the time the right for making such applications or commencing such proceedings accrued."

*The question was proposed*

MR. SPEAKER.—I will put the amendment to vote the question is :

For sub-clause (2), substitute the following :—

"(2) All applications under section 7 of the principal Act, and proceedings connected there with,—

(i) pending before a Tashildar, before the date or commencement of this Act, shall as and from the said date transferred to the Tribunal and shall be continued and disposed of by such Tribunal, in accordance with the principal Act as amended by this Act, as if such applications and proceedings have been filled or commenced before such Tribunal ;

(ii) having been disposed off by the Tahsildar of pending in ppeal or revision, such appel or revision shall abate and the applications or proceedings giving rise to such appeal or revision, shall stand re-opened and transferred to and commenced afresh before the Tribunal as if the amendments made by this Act to the principal Act were in force at the time the right for making such applications or commencing such proceedings accrued",

*The amendment was adopted*

MR. SPEAKER.—The question is :

"That clause 40 as amended do stand part of the Bill"

*The motion was adopted*

(Clause 40 as amended was added to the Bill)

CLAUSE 1, etc:

MR. SPEAKER.—There is an amendment by Sri T R, Shamanna. It may be moved :

† SRI T. R. SHAMANNA.—I move :

"That in sub-clause (2) for the words and figures first day of march 1974 the words and figures 1st day of March 1961 shall be substituted,"

*The Question was proposed*

ಮಾನ್ಯ ಅಧ್ಯಕ್ಷರೇ, ನನಗೆ ಗೊತ್ತಿರುವಹಾಗೆ ಇದುವರೆಗೆ ನಮ್ಮ ಅಸೆಂಬ್ಲಿಯ ಚರಿತ್ರೆಯಲ್ಲಿ ಇಷ್ಟೊಂದು ಅಮೆಂಡ್‌ಮೆಂಟ್‌ಗಳು ಯಾವತ್ತೂ ಬಂದಿದ್ದಿಲ್ಲ. ಅಮೆಂಡ್‌ಮೆಂಟ್‌ಗಳ ಮೇಲೆ ಅಮೆಂಡ್‌ಮೆಂಟ್‌ಗಳು ಬಂದಿವೆ. ಇದು ಒಂದು ಚರಿತ್ರಾರ್ಹವಾದುದು ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ನಾನು ತಂದಿರತಕ್ಕ ತಿದ್ದುಪಡಿ ಇಷ್ಟೆ. "The words and figures first day of March 1974 the words and figures 1st day of March 1961 shall be substituted" ಈಗ ಮಾನ್ಯ ಮಂತ್ರಿಗಳು ಇದಕ್ಕೆ ಸಂಬಂಧಪಟ್ಟಂತೆ ತಿದ್ದುಪಡಿ ಏನಿದೆ ಇದರ ಆನುಕೂಲ ಪ್ರತಿಕೂಲ ಎಲ್ಲಾ 1974 ರಿಂದಲೇ ಎಂದು ಹೇಳಿದ್ದಾರೆ. ನಾನು ತಂದಿರುವುದು ಏನೆಂದರೆ, ಯಾವತ್ತೂ ಲ್ಯಾಂಡ್ ರಿಫಾರ್ಮ್ಸ್ ಜಾರಿಗೆ ಬಂತೋ ಅವತ್ತಿನಿಂದ ಆಗುವುದು ಒಳ್ಳೆಯದು. ಇವರೊಬ್ಬರೇ ಕೀರ್ತಿವನ್ನು ಹಾಕಿಕೊಳ್ಳದೇ ಹಿಂದೆ ಇದಕ್ಕಾಗಿ ಶ್ರಮಿಸಿದವರಿದ್ದಾರೆ. ಹಿಂದೆ ಮಂತ್ರಿಗಳಾಗಿದ್ದಂಥ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಮತ್ತಿತರರು ದೇಶದಲ್ಲಿ ಶ್ರಮಿಸಿದ್ದಾರೆ. ಆದುದರಿಂದ 1961ರಲ್ಲಿ ಈ ಕಾನೂನು ಏನು ಜಾರಿಗೆ ಬಂತು ಆಗಿನಿಂದಲೇ ಇದರ ಅನುಕೂಲ ಪ್ರತಿಕೂಲಗಳು, ಯಶಸ್ಸು ಅಪಯಶಸ್ಸು ಆಗಲಿ ಎನ್ನುವ ಉದ್ದೇಶದಿಂದ ಅಮೆಂಡ್‌ಮೆಂಟ್‌ನ್ನು ತಂದಿದ್ದೇನೆ, ಇದನ್ನು ಒಪ್ಪಿಕೊಳ್ಳಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ವಿ. ಕಕ್ಕಿಲಾಯ.—ಮಾನ್ಯ ಶಾಮಣ್ಣನವರು ತಂದಿರುವ ತಿದ್ದುಪಡಿಯಲ್ಲಿ ಏನು ಹೇಳಿದ್ದಾರೆಂದರೆ, 1961 ರಿಂದ ಇದನ್ನು ಜಾರಿಗೆ ಕೊಟ್ಟಹಾಗೆ ತಿದ್ದುಪಡಿಮಾಡಿ ಎಂದು ಸೂಚನೆ ಮಾಡಿದ್ದಾರೆ. 1961ರಲ್ಲಿ ಆಕ್ಟ್ ಮಂಜೂರಾಯಿತು. ಆದರೂ ಕೂಡ ಅದನ್ನು ಜಾರಿಗೆ ಕೊಟ್ಟದ್ದು 1965ನೇ ಆಕ್ಟೋಬರ್ 2 ರಂದು. ಆವರಿಗೆ ಜ್ಞಾಪಕವಿರಬಹುದು. 1965 ರಲ್ಲಿ ಇದನ್ನು ಜಾರಿಗೆ ಕೊಟ್ಟರೂ ಅದರ ಪ್ರಯೋಜನ ಅಂದರೆ ರೈತರಿಗೆ ಒನರ್‌ಶಿಪ್ ಕೊಡತಕ್ಕಂಥಾದ್ದು, ಆಕ್ಯುಪೆನ್ಸಿ ರೈಟ್ ಕೊಡತಕ್ಕಂಥಾದ್ದು—ಇದೆಲ್ಲಾ ಆಗಿದ್ದು 1st day of March 1974 ರಿಂದ. ಭೂಮಾಲೀಕರ ಮಾಲೀಕತ್ವ ಏನಿತ್ತು ಅದು ಸರ್ಕಾರದಲ್ಲಿ ನಿಕ್ಷೇಪವಾಗಿದ್ದು ಈ ತಿದ್ದುಪಡಿ ಬಂದಮೇಲೆ. 1-3-74ರಲ್ಲಿ ಈ ಶಾಸನ ದೇಶದಲ್ಲಿ ಜಾರಿಗೆ ಬಂತು ಎನ್ನುವುದನ್ನು ಮಾನ್ಯ ಶಾಮಣ್ಣನವರೂ ಒಪ್ಪುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಆದುದರಿಂದ 1-3-74 ರಂದು ಈ ಶಾಸನ ಏನು ಜಾರಿಗೆ ಬಂದಿದೆ ಇದು ಬಹಳ ಮಹತ್ವವಾದ ದಿನ. ಇದನ್ನು ಹಿಂದಿನ ಶಾಸಕರು, ಮಂತ್ರಿಗಳಿಗೆ ಹೋಲಿಸಿದರೆ ಅದು ಸ್ವಲ್ಪ ವಾಸ್ತವಿಕತೆಗೆ ಸ್ವಲ್ಪ ದೂರವಾಗುತ್ತದೆ. ಫಸ್ಟ್ ಡೇ ಆಫ್ ಮಾರ್ಚ್ 1974 ಏನಿದೆ ಇದು ಬಹಳ ಮಹತ್ವದ ದಿನ. ಭೂಮಾಲೀಕರಿಗೆ ಇದ್ದ ಮಾಲೀಕತ್ವ ಸರ್ಕಾರದಲ್ಲಿ ನಿಕ್ಷೇಪವಾಗಿದ್ದು, ಆಮೇಲೆ ಈ ಮಾಲೀಕತ್ವವನ್ನು ವರ್ಗಾಯಿಸುವಂಥ ಕಾರ್ಯ ಟ್ರಿಬ್ಯೂನಲ್‌ಗಳ ಮೂಲಕ ನಡೆದಿದೆ. ಇದನ್ನು 1961 ರಿಂದಲೇ ಆಗಿದ್ದು ಏನ್ನುವ ರೀತಿಯಲ್ಲಿ ಹೇಳಿ ತಿದ್ದುಪಡಿ ತರುವುದು ಎಂದರೆ ಅದು 1st day of

March 1974 ದಿನ ಏನಿದೆ, ಈ ಒಂದು ಚಾರಿತ್ರಿಕ ದಿನದ ಮಹತ್ವವನ್ನು ಕಳೆದಹಾಗೆ ಆಗುತ್ತದೆ, ಆಲ್ಲದೆ ವಾಸ್ತವಾಂಶಕ್ಕೂ ಅದು ದೂರವಾಗಿದೆ. ಆದುದರಿಂದ ಮಾನ್ಯ ಮಂತ್ರಿಗಳು ತಂದಿರತಕ್ಕದ್ದು ಸೂಕ್ತವಾಗಿದೆ ಎನ್ನುವುದು ನನ್ನ ಅಭಿಪ್ರಾಯ.

ಶ್ರೀ ಟಿ. ಆರ್. - ಶಾಮಣ್ಣ.—ಒಟ್ಟಿನಲ್ಲಿ ನಮಗೆ ಅನ್ನ ಕೊಡತಕ್ಕ ರೈತನ ಬಾಳು ಚೆನ್ನವಾಗಲೀ, ದೇಶಕ್ಕೆ ಒಳ್ಳೆಯದಾಗಲೀ ಎನ್ನುವ ಉದ್ದೇಶದಿಂದ ಈ ಅಮೆಂಡ್‌ಮೆಂಟ್‌ನ್ನು ಪಾಪಸ್ ತೆಗೆದುಕೊಳ್ಳುತ್ತೇನೆ.

*The amendment was by leave of the House withdrawn*

MR. SPEAKER,—The question is :

"That Clause 1, the Long Title, Preamble and the Enacting Formula do stand part of the Bill".

*The Motion was adopted*

(Clause 1, the long Title, Preamble and the Enacting Formula were added to the Bill).

*Motion to pass*

SRI B. BASAVALINGAPPA.—I move :

"That the Karnataka Land Reforms (Amendment) Bill, 1978, as amended be passed."

MR. SPEAKER.—The question is :

"That the Karnataka Land Reforms (Amendment) Bill, 1978, as amended, be passed."

*The motion was adopted and the Bill as amendment was passed*

MR. SPEAKER.—We shall take up the next Bill.

## KARNATAKA VILLAGE PANCHAYATS AND LOCAL BOARDS (SECOND AMENDMENT) BILL, 1978

*Motion to Consider*

SRI K. PRABHAKAR (Minister for Rural Development and Panchayat Raj). — I move :

"That the Karnataka Village Panchayats and Local Boards (Second Amendment) Bill, 1978, be taken into consideration."

*The question was proposed*

ಶ್ರೀ ಕೆ. ಪ್ರಭಾಕರ್ (ಗ್ರಾಮಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವರು).—ಮಾನ್ಯ ಅಧ್ಯಕ್ಷರೇ, ಗ್ರಾಮಪಂಚಾಯಿತಿಗಳಿಗೆ ಹಾಗೂ ತಾಲ್ಲೂಕು ಅಭಿವೃದ್ಧಿ ಮಂಡಲಿಗಳಿಗೆ ಸಂಬಂಧಪಟ್ಟಂತೆ ಈ ಕಾನೂನು ಜಾರಿಗೆ ಬಂದಿದ್ದು ೧೯೫೦ ನೇ ಇಸವಿಯಲ್ಲಿ. ಅಂದಮೇಲೆ ೧೯-೨೦ ವರ್ಷಗಳಿಂದ ಆ ಕಾನೂನು ಜಾರಿಯಲ್ಲಿದ್ದಾಗ್ಗೆ ಅದರ ಪರಿಪಾಲನೆ ಮತ್ತು ಪ್ರಜಾಸೇವೆಯಲ್ಲಿ ಆ ಕಾನೂನಿನ ಇರುವಿಕೆಯಿಂದ ಆಗುತ್ತಿದ್ದಂಥ ಅನುಕೂಲ ಅನಾನುಕೂಲಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಸೂಕ್ತರೀತಿಯಲ್ಲಿ